ಕರೆಯುತ್ತಾರೆ. ಹೋಗುತ್ತೇನೆ. ಯಾಂತ್ರಿಕವಾಗಿ ಶಾಸ್ತ್ರಗಳಲ್ಲಿ ಭಾಗವಹಿಸುತ್ತೇನೆ. ಕಾಶಿಯಾತ್ರೆ ಮುಗಿಯುತ್ತದೆ.

'ಕೂತ್ಕೊಳ್ಳೋ ಕಿಟ್ಟಿ... ನೀನು ಬಾರಮ್ಮ ಈ ಕಡೆ ಭಾಗ್ಯಮ್ಮ'– ಶಾಸ್ತ್ರಿಗಳು ಕಲ್ಯಾಣ ಮಂಟಪದ ಬಳಿ ಕರೆಯುತ್ತಾರೆ. ಕೂರಿಸಿಕೊಳ್ಳುತ್ತಾರೆ. ಶೀಲಳನ್ನು ಹೆದರುತ್ತಲೇ ನೋಡುತ್ತೇನೆ. ಅವಳ ಮುಖದಲ್ಲಿ ಯಾವುದೋ ದೃಢವಾದ ಭಾವ ಕವಿದಿದ್ದು ನನಗಂತೂ ಅರ್ಥವಾಗದೆ ಭೀತಿ ಮುತ್ತಿಕೊಂಡುಬಿಡುತ್ತದೆ. ಶಾಮಾಶಾಸ್ತ್ರಿಗಳು ಹೇಳಿಕೊಟ್ಟ ಮಂತ್ರಗಳನ್ನು ನಾಲಿಗೆ ನುಡಿಯುತ್ತಿದ್ದರೂ ಮನಸ್ಸು ಹೊರಬಾಗಿಲಲ್ಲೇ ಇರುತ್ತದೆ. ಎದೆ ಎದ್ದೆದ್ದು ಬೀಳುತ್ತಿರುತ್ತದೆ. ನಾಲಿಗೆ ಒಣಗಿಬರುತ್ತದೆ. ಏನೇನೋ ಆಲೋಚನೆಗಳು ಹಿಂಜುತ್ತವೆ. ನನಗೆ ಎದುರಾಡಿದನೆಂದು ಜಿದ್ದಿನಿಂದ ವಿಲೇಜ್ ಅಕೌಂಟೆಂಟ್ ಒಬ್ಬನನ್ನು 'ಸಸ್ಪೆಂಡ್'ನಲ್ಲಿಡಿಸಿದ್ದು, ಮದುಕಿಯೊಬ್ಬಳ ಜಮೀನು ಎತ್ತಿ ಹಾಕಿದ್ದು, ಸ್ಟೋರ್ ಆಡಿಟ್‌ಗೆಂದು ವಿಜಿಲೆನ್ಸ್ ಬರುವರೆಂದಾಗ ಇಡೀ ಸ್ಟೋರನ್ನೇ ಎಲೆಕ್ಟ್ರಿಕ್ ಷಾರ್ಟ್ ಸರ್ಕ್ಯೂಟ್ ನೆಪದಲ್ಲಿ ಸುಟ್ಟು ನಿರ್ನಾಮ ಮಾಡಿದ್ದು, ಮಗಳಿಗೆ ಚುಡಾಯಿಸಿದನೆಂದು ಪೊಲೀಸ್ ಠಾಣೆಯಲ್ಲಿ ಒಬ್ಬನಿಗೆ ಚಿತ್ರಹಿಂಸೆ ಕೊಡಿಸಿದ್ದು, ಅವನು ಸತ್ತೇ ಹೋದದ್ದು. ಅಪರಾಧಗಳ ನೆನಪಿನ ಭಾರದಿಂದ ನಿತ್ರಾಣನಾಗುತ್ತೇನೆ. ಈ ಎಲ್ಲರ, ಎಲ್ಲದರ ಶಾಪ ತಟ್ಟಲು ಈ ಕ್ಷಣಗಳೇ ಆಯ್ಕೆಯಾದವೆ? ಎಲ್ಲಿ ಕುಸಿದುಬಿದ್ದು ಕಾರ್ಯಗಳಿಗೆ ನಾನೇ ವಿಘ್ನ ತಂದೊಡ್ಡುವನೋ ಎಂಬ ಭಯದಿಂದ ಭಾಗ್ಯಳ ಆಸರೆಯಲ್ಲಿ ನಿಲ್ಲಲು ಯತ್ನಿಸುತ್ತೇನೆ. ಇದನ್ನರಿತೋ ಏನೋ ಒಂದು ಕಡೆ ಭಾಗ್ಯ ಮತ್ತೊಂದು ಕಡೆ ಅಣ್ಣ ಬಳಿಯೇ ಇದ್ದು ಧೈರ್ಯ ತುಂಬುತ್ತಾರೆ. ಅಂತರಪಟದ ಹಿಂದೆ ವಧುವರರು ನಿಂತಾಗಲೇ ಹೊರಬಾಗಿಲಲ್ಲಿ ಗಡ್ಡಧಾರಿ ಯುವಕ ಕಾಣಿಸಿಕೊಳ್ಳುತ್ತಾನೆ. ಈ ಗಡ್ಡದವನು ಆ ಪತ್ರಿಕೆಯವನೇ. ಹೊರಗಡೆ ಯಾರ್‍ಯಾರಿದ್ದಾರೋ. ನನಗೆ ಜ್ವರ ಬಂದಂತಾಗುತ್ತದೆ. ನಡಗುತ್ತೇನೆ. ಅವನು ಬಂದು ಜನರ ಮಧ್ಯೆ ಕೂರುತ್ತಾನೆ. ಕೈನಲ್ಲಿ ಏನನ್ನೋ ಹಿಡಿದಿದ್ದಾನೆ. ಕರವಸ್ತ್ರ ಮುಚ್ಚಿರುವುದರಿಂದ ಅದೂ ಸ್ಪಷ್ಟವಾಗದು. ಮೊದಲ ಮಗಳ ಧಾರೆ ನಡೆಯುವಾಗ ನನ್ನ ಕಣ್ಣುಗಳೆಲ್ಲ ಗಡ್ಡದವನ ಮೇಲೆಯೇ ಇರುತ್ತದೆ. ಎರಡನೆಯವಳ ಧಾರೆ ಆರಂಭವಾದಗಲೂ ನನ್ನ ಚಿತ್ತವೆಲ್ಲಾ ಅವನ ಸುತ್ತಲೆ. ಭಾಗ್ಯ ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ. ಭಯದಲ್ಲಿ ನನಗೆ ದುಃಖವೂ ಆಗದು. ಎಲ್ಲವೂ ಯಾಂತ್ರಿಕ. ಶೀಲಳ ಕೊರಳಿಗೆ ತಾಳಿಬಿದ್ದಾಗ ಸೋತುಹೋಗಿದ್ದ ನಾನು ಮಂಟಪದ ಬಳಿಯೇ ಕುಸಿಯುತ್ತೇನೆ. ಅಣ್ಣ ಕರೆತಂದು ಮೂಲೆಯಲ್ಲಿ ಕುರ್ಚಿ ಹಾಕಿ ಕೂರಿಸುತ್ತಾನೆ. 'ಗೆದ್ದೆ ಬಿಡು ಕಿಟ್ಟಿ, ಸಮಾಧಾನವಾಗಿ ಕೂತ್ಕೊ' ಅಂತ್ಹೇಳಿ ಹೊರಟುಹೋಗುತ್ತಾನೆ. ನುಗ್ಗಿ ಬರುವ ಅಳುವನ್ನು ನುಂಗಿಕೊಳ್ಳುತ್ತೇನೆ. ನಿರಾಳವಾಗಿ ಉಸಿರಾಡಲು ಯತ್ನಿಸುತ್ತೇನೆ. ನಿಗಾ ಗಡ್ಡದವನ ಮೇಲಿರುತ್ತದೆ. ಅವನು ಕೈನಲ್ಲಿದ್ದದನ್ನು ಹಿಡಿದು ವಧುವರರನ್ನು ಸಮೀಪಿಸುತ್ತಾನೆ. ಎದೆ ಬಡಿದುಕೊಳ್ಳುತ್ತದೆ.

ಶೀಲ ಅವಳ ಗಂಡನಿಗೆ ಪರಿಚಯಿಸುತ್ತಿದ್ದಾಳೆ– ಏನಂತಲೋ! ಗಡ್ಡದವನು ಕರವಸ್ತ್ರ ತೆಗೆದು ಹೊಳೆಯುವ ರ್‍ಯಾಪರ್ ಸುತ್ತಿರುವ ಬಾಕ್ಸ್ ಕೊಟ್ಟು ಸ್ವಸ್ಥಾನಕ್ಕೆ ಬರುತ್ತಾನೆ. ಬಳುವಳಿಯ ರಾಶಿಯಲ್ಲಿ ಆ ಬಾಕ್ಸನ್ನು ಉರುಳಿಸುತ್ತಾಳೆ, ಶೀಲ. ಈಗ ಸ್ವಲ್ಪ ಹಾಯೆನಿಸುತ್ತದೆ. ಶೀಲಳ ಬಗ್ಗೆ ಮಮತೆಯ ಪೂರವೇ ಉಕ್ಕುತ್ತದೆ. ಅಭಿಮಾನದಿಂದ ಅವಳ ಬಳಲಿದ ಮುಖವನ್ನೇ ದಿಟ್ಟಿಸುತ್ತೇನೆ. 'ತಂದೆಯ ಮಾನ ಉಳಿಸಿಬಿಟ್ಟಳು' ಎಂದುಕೊಳ್ಳುತ್ತ ಒಳಗೇ ಕುಬ್ಜನಾಗುತ್ತೇನೆ. ತಂದೆಗಾಗಿ ಅವಳು ಮಾಡಿದ ತ್ಯಾಗ ಸಾಮಾನ್ಯವಾದುದೆ? ನನ್ನಂತಹ ನಿಯತ್ತಿಲ್ಲದವನಲ್ಲಿ ಹುಟ್ಟಿದ ಮಗಳ ಪ್ರಾಮಾಣಿಕ ಧೋರಣೆಯ ಬಗ್ಗೆ ಬೀಗುವಂತಾಗುತ್ತದೆ. ಪ್ರೇಮಕ್ಕೋಸ್ಕರ